# ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ. ನಂ: **839 /2018**

| | | | |
|---|---|---|---|
| ಸಾಕ್ಷಿಯ ಹೆಸರು | : ಉಮೇಶ | ಸಿ.ಡಬ್ಲ್ಯೂ | : 10 |
| ತಂದೆ ಹೆಸರು | : ಲಕ್ಕೇಗೌಡ | ಪಿ.ಡಬ್ಲ್ಯೂ | : 8 |
| ವಯಸ್ಸು | : 51 **ವರ್ಷ** | ಪ್ರಮಾಣೀಕರಿಸಿದ ದಿ: | 19/05/2025 |
| ವೃತ್ತಿ | : ಕೃಷಿ | | |
| ವಾಸ | : ಸಿಂಗಮ್ಮ ದೇವಸ್ಥಾನ ಹೊಳೆನರಸೀಪುರ | | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ:- ಮಾನ್ಯ ಎ.ಪಿ.ಪಿ.ಯವರಿಂದ:

ಈ ಪ್ರಕರಣದ ಕುರಿತು ನನಗೆ ಏನು ತಿಳಿದಿಲ್ಲ. ನ್ಯಾಯಾಲಯದ ಮುಂದಿರುವ ರತ್ನಮ್ಮ ಮತ್ತು ದೇವರಾಜು ರವರನ್ನು ನಾನು ಈ ಮುಂಚೆ ನೋಡಿಲ್ಲ.

**(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಸಾಕ್ಷಿಯ 161 ಹೇಳಿಕೆಯನ್ನು ಪರಿಶೀಲಿಸಿ ಪಾಟಿ ಸವಾಲಿಗ ಅನುಮತಿ ನೀಡಲಾಯಿತು.)**

ಪಾಟೀ ಸವಾಲು: - ಮಾನ್ಯ ಎ.ಪಿ.ಪಿ. ರವರಿಂದ:

1. ದಿನಾಂಕ 16.01.2018 ರ ಮದ್ಯಾಹ್ನ 3.00 ಗಂಟೆಗೆ ನಾನು ಆಶ್ರಯ ಬಡಾವಣೆಯ ಚಾ ಸಾ 9 ರ ಮನೆಯ ಹತ್ತಿರ ಇರುವಾಗ ಒಂದು ಮತ್ತು ಎರಡನೇ ಆರೋಪಿಗಳು ಅನಧಿಕೃತ ಕಟ್ಟಡ ತೆರವು ಮಾಡಲು ಬಂದ ಹೊಳೆನರಸೀಪುರ ಪುರಸಭೆ ಮುಖ್ಯಾಧಿಕಾರಿಗಳಿಗೆ ಅವ್ಯಚ ಶಬ್ದಗಳಿಂದ ಬೈದು ಅವರ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರ ಎಂದರೆ ನನಗೆ ಗೊತ್ತಿಲ್ಲ. ಹಾಗೂ ನಾನು ಮತ್ತು ಚಾ ಸಾ 9 ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ.
2. ಸಾಕ್ಷಿಯ ಅವರ 161 (3) ಸಿ ಆರ್ ಪಿ ಸಿ ಹೇಳಿಕೆಯನ್ನು ನಿ ಪಿ 3 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಆ ರೀತಿ ಹೇಳಿಕೆಯನ್ನು ಪೊಲೀಸ್ ಠಾಣೆಯಲ್ಲಿ ತಾವು ಪೊಲೀಸರಿಗೆ ಹೇಳಿಕೆ ನೀಡಿದ್ದೇನು ಎನ್ನುತ್ತಾರೆ.

ಪಾಟೀ ಸವಾಲು: ಶ್ರೀ ಜಿ ಎನ್ ಎಸ್ ವಕೀಲರಿಂದ:

ನಾನು ದಿನಾಂಕ 17.01.2018 ರಂದು ಪೊಲೀಸರಿ ಹೇಳಿಕೆಯ ಮೇರೆಗೆ ಪೊಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ ಎಂದರೇ ಸರಿ. ಸದರಿ ಹೇಳಿಕೆಯುನ್ನು ಹೊರತು ಪಡಿಸಿ ವಿವಾದಿತ ಘಟನೆ ಬಗ್ಗೆ ನನಗೆ ಏನು ತಿಳಿದಿಲ್ಲ.

ಮರು ವಿಚಾರಣೆ ಇಲ್ಲ:

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ